<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **54** |
| **ಸದಸ್ಯರ ಹೆಸರು** | : | **ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **12-09-2022** |
| **ಉತ್ತರಿಸುವವರು** | : | **ಸನ್ಮಾನ್ಯ ಮುಖ್ಯಮಂತ್ರಿಗಳು** |

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| ಅ) | ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಅವಘಡಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರಕರಣವಾರು ಮಾಹಿತಿ ಒದಗಿಸುವುದು) | ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಅವಘಡಗಳ ಸಂಖ್ಯೆ:- 4639 ವಿವರವನ್ನು **ಅನುಬಂಧದಲ್ಲಿ ನೀಡಲಾಗಿದೆ.** |
| ಆ) | ಅಗ್ನಿ ಅವಘಡಗಳು ಸಂಭವಿಸಿದ್ದಲ್ಲಿ ಅಂತಹ ಅಗ್ನಿ ಅವಘಡಗಳು ಪುನರಾವರ್ತನೆಯಾಗದಂತೆ ಸರ್ಕಾರ ಏನೆಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ; | ಬೆಂಕಿಯ ಅವಘಡಗಳನ್ನು ತಡೆಯಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ:-<br><br>1. ಕಾಡ್ಗಿಚ್ಚು ನಿಯಂತ್ರಿಸಲು ನಿರ್ದಿಷ್ಟ ಸ್ಥಳಗಳಲ್ಲಿ ಬೆಂಕಿ ತಡೆ ಕಾವಲುಗಾರರನ್ನು ನಿಯೋಜಿಸಲಾಗುತ್ತಿದೆ. ಕಾಡ್ಗಿಚ್ಚು ಉಂಟಾದಲ್ಲಿ, ಅಧಿಕಾರಿಗಳು / ಮುಂಚೂಣಿ ಸಿಬ್ಬಂದಿ/ANTI POUCHING CAMP (APC)/ RAPID RESPONSE TEAM (RRT)/ ಕಾವಲುಗಾರರೊಂದಿಗೆ ಬೆಂಕಿ ನಂದಿಸುವ ಕಾರ್ಯಾಚರಣೆ ಕೈಗೊಳ್ಳಲಾಗುವುದು.<br><br>2. ಬೆಂಕಿ ಬೀಳುವುದನ್ನು ತಡೆಗಟ್ಟುವುದಕ್ಕಾಗಿ ಮುಂಜಾಗ್ರತಾ ಕ್ರಮವಾಗಿ ಬೆಂಕಿ ರೇಖೆಗಳನ್ನು ನಿರ್ಮಿಸುವುದು/ನಿರ್ವಹಣೆ ಮಾಡುವುದು.<br><br>3. ಬೆಂಕಿ ಕಾವಲುಗಾರರನ್ನು ನೇಮಿಸುವ ಮೂಲಕ ಬೆಂಕಿ ರಕ್ಷಣಾ ಕಾರ್ಯ ಕೈಗೊಳ್ಳುವುದು.<br><br>4. ಬೆಂಕಿಯಿಂದ ಸಂರಕ್ಷಣೆ ಮಾಡುವ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸುವುದು.<br><br>5. ದಿನಪತ್ರಿಕೆ/ರೇಡಿಯೋ/ದೂರದರ್ಶನ ಮೂಲಕ ಜಾಗೃತಿ ಕ್ರಮಗಳನ್ನು ಪ್ರಸಾರ ಮಾಡುವುದು.<br><br>6. ಬೆಂಕಿ ಅವಘಡಗಳು ಸಂಭವಿಸಿದ ಸ್ಥಳವನ್ನು ಪತ್ತೆ ಹಚ್ಚಲು ಸೂಕ್ಷ್ಮ ಪ್ರದೇಶಗಳಲ್ಲಿ ಕಾವಲು ಗೋಪುರಗಳನ್ನು ನಿರ್ಮಿಸಿ, ರಾತ್ರಿ-ಹಗಲು ಪಾಳಿಯಲ್ಲಿ ಬೆಂಕಿ ನಿರ್ವಹಣೆಯ ಮೇಲ್ವಿಚಾರಣೆ ಕೈಗೊಳ್ಳುವುದು. |

| | | |
|---|---|---|
| | | 7. ಬೆಂಕಿ ರಕ್ಷಣಾ ಕಾರ್ಯದಲ್ಲಿ ಭಾಗವಹಿಸುವ ಸಿಬ್ಬಂದಿಗಳಿಗೆ ಬೆಂಕಿ ನಿರೋಧಕ ಬಟ್ಟೆ, ಬೂಟುಗಳು, ಬೆಂಕಿ ರಕ್ಷಣಾ ಕವಚಗಳನ್ನು ಒದಗಿಸಿ ಬೆಂಕಿ ಆರಿಸಲು ಕ್ರಮ ಕೈಗೊಳ್ಳುವುದು.<br><br>8. ಕರ್ನಾಟಕ ಅರಣ್ಯ ಇಲಾಖೆಯು ಬೆಂಕಿಯ ಸಂದರ್ಭದಲ್ಲಿ ಬೆಂಕಿಯ ಮುಂಗಡ ಮೇಲ್ವಿಚಾರಣೆಗಾಗಿ ಭಾರತೀಯ ಅರಣ್ಯ ಸಮೀಕ್ಷೆ ಮತ್ತು ರಾಷ್ಟ್ರೀಯ ದೂರ ಸಂವೇದಿ ಏಜೆನ್ಸಿ, ಹೈದರಾಬಾದ್‌ನ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC), ಬೆಂಗಳೂರು, ಇವರ ಸಹಯೋಗದೊಂದಿಗೆ **"ಅರಣ್ಯ ಬೆಂಕಿ, ಉಸ್ತುವಾರಿ ಮತ್ತು ವಿಶ್ಲೇಷಣೆ ಕೋಶ"** ವನ್ನು ಸ್ಥಾಪಿಸಲಾಗಿದ್ದು, ಸದರಿ ಕೋಶದ ವತಿಯಿಂದ ಕಾಡ್ಗಿಚ್ಚನ್ನು ಪತ್ತೆಹಚ್ಚಲು ಉಪಗ್ರಹ ಚಿತ್ರಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಸದರಿ ತಂತ್ರಜ್ಞಾನವು ಕಾಡಿನ ಬೆಂಕಿಯನ್ನು ಪರಿಣಾಮಕಾರಿಯಾಗಿ ಮತ್ತು ಸಮಯೋಚಿತವಾಗಿ ನಿಯಂತ್ರಿಸಲು ಸಹಾಯ ಮಾಡುತ್ತದೆ. ನೈಜ ಸಮಯದಲ್ಲಿ ಉಪಗ್ರಹ ಮೂಲಕ ಸ್ವೀಕೃತವಾದ ಸಂದೇಶಗಳನ್ನು ಎಸ್.ಎಂ.ಎಸ್. ಮೂಲಕ ಅಭಿವೃದ್ಧಿ ಪಡಿಸಲಾಗಿದ್ದು, ಆಯಾ ಕ್ಷೇತ್ರದ ಸಿಬ್ಬಂದಿಗಳಿಗೆ ಸಂದೇಶ ರವಾನಿಸಿ ಅದನ್ನು ಸಿಸ್ಟಮ್ ನಲ್ಲಿ ದಾಖಲು ಮಾಡಲಾಗುತ್ತದೆ.<br><br>9. ತುರ್ತು ಪರಿಸ್ಥಿತಿಗಳಿಗೆ ಹಾಜರಾಗಲು ಆಯಕಟ್ಟಿನ ಸ್ಥಳಗಳಲ್ಲಿ ತಾತ್ಕಾಲಿಕ ಅಗ್ನಿಶಾಮಕ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಅರಣ್ಯ ಇಲಾಖೆಯೊಂದಿಗೆ ಸಹಕರಿಸುತ್ತಿದೆ.<br><br>10. ವೈರ್‌ಲೆಸ್ ಸೆಟ್‌ಗಳಂತಹ ಪರಿಣಾಮಕಾರಿ ಸಂವಹನ ಸಾಧನಗಳ ಬಳಕೆ.<br><br>11. ದೊಡ್ಡ ಬೆಂಕಿಯ ಸಂದರ್ಭದಲ್ಲಿ, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಗಳ ಸೇವೆಯನ್ನು ಪಡೆದು ಬೆಂಕಿಯನ್ನು ನಂದಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. |

...3

| | | |
|---|---|---|
| ಇ) | ಅಗ್ನಿ ಅವಘಡಗಳಿಂದುಂಟಾದ ನಷ್ಟದ ಪ್ರಮಾಣ ಎಷ್ಟು; ಅದನ್ನು ಸರಿದೂಗಿಸುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಕೇವಲ ನೆಲಬೆಂಕಿ ಬಿದ್ದಿದ್ದು, ಹುಲ್ಲುಗಾವಲು ಹಾಗೂ ಕುರುಚಲು ಗಿಡಗಳು ಮಾತ್ರ ಸುಟ್ಟಿರುತ್ತವೆ ಹಾಗೂ ಬೆಲೆಬಾಳುವ ಅರಣ್ಯ ಉತ್ಪನ್ನಗಳು ಸುಟ್ಟಿರುವುದಿಲ್ಲವಾದ ಕಾರಣ ಸರ್ಕಾರಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ.<br><br>ಅರಣ್ಯ ಪ್ರದೇಶಗಳು ಹೆಚ್ಚಿನ ಪ್ರಮಾಣದಲ್ಲಿ ಕುರುಚಲು ಹಾಗೂ ಪೊದೆಗಳಿಂದ ಕೂಡಿದ ಕಾಡಿನ ವಿಧಕ್ಕೆ ಸೇರಿರುತ್ತವೆ. ಕಾಡಿಗೆ ಬಿದ್ದಿರುವ ಬೆಂಕಿಯು ನೆಲಮಟ್ಟದಾಗಿದ್ದು ಎತ್ತರದ ಹಾಗೂ ದೊಡ್ಡ ಗಾತ್ರದ ಗಿಡ ಮರಗಳಿಗೆ ಯಾವುದೇ ರೀತಿಯ ಹಾನಿಯಾಗಿರುವುದಿಲ್ಲ. ಬೆಂಕಿ ಕಾಡ್ಗಿಚ್ಚು ಸಂಭವಿಸಿ ಹಾನಿಗೀಡಾದ ಅರಣ್ಯ ಪ್ರದೇಶದಲ್ಲಿ ನಂತರ ಬರುವಂತಹ ಮುಂಗಾರಿನಲ್ಲಿ ಬೀಜ ಬಿತ್ತುವುದರ ಮೂಲಕ ಅರಣ್ಯ ಪ್ರದೇಶಗಳನ್ನು ಸ್ವಾಭಾವಿಕ ಸ್ಥಿತಿಗೆ ತರಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 121 ಎಫ್‌ಡಬ್ಲ್ಯೂಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿಗಳು

ವಿಧಾನ ಪರಿಷತ್ತಿನ ಸದಸ್ಯರಾದ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 54 ಕ್ಕೆ ಅನುಬಂಧ

**ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಪ್ರಕರಣಗಳ ವಿವರ**

| ಕ್ರ.ಸಂ | ವೃತ್ತದ ಹೆಸರು | ವಿಭಾಗದ ಹೆಸರು | ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಪ್ರಕರಣಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು | ಬೆಂಗಳೂರು ನಗರ | 16 |
| | | ಬೆಂಗಳೂರು ಗ್ರಾಮಾಂತರ | 174 |
| | | ರಾಮನಗರ | 607 |
| | | ಕೋಲಾರ | 0 |
| | | ಚಿಕ್ಕಬಳ್ಳಾಪುರ | 217 |
| | ಒಟ್ಟು | | **1014** |
| 2 | ಬೆಳಗಾವಿ | ಬೆಳಗಾವಿ | 0 |
| | | ಗೋಕಾಕ | 0 |
| | | ಬಾಗಲಕೋಟೆ | 0 |
| | | ವಿಜಯಪುರ | 0 |
| | ಒಟ್ಟು | | **0** |
| 3 | ಬಳ್ಳಾರಿ | ಬಳ್ಳಾರಿ | 36 |
| | | ಕೊಪ್ಪಳ | 9 |
| | | ಚಿತ್ರದುರ್ಗ | 4 |
| | | ದಾವಣಗೆರೆ | 3 |
| | ಒಟ್ಟು | | **52** |
| 4 | ಚಾಮರಾಜನಗರ | ಚಾಮರಾಜನಗರ. | 28 |
| | | ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ. | 8 |
| | | ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ | 4 |
| | ಒಟ್ಟು | | **40** |
| 5 | ಚಿಕ್ಕಮಗಳೂರು | ಚಿಕ್ಕಮಗಳೂರು | 45 |
| | | ಕೊಪ್ಪ | 66 |
| | ಒಟ್ಟು | | **111** |
| 6 | ಧಾರವಾಡ | ಧಾರವಾಡ | |
| | | ಗದಗ | 33 |
| | | ಹಾವೇರಿ | 313 |
| | ಒಟ್ಟು | | **346** |
| 7 | ಗುಲ್ಬರ್ಗ | ಗುಲ್ಬರ್ಗ | 2 |
| | | ಬೀದರ್ | 78 |
| | | ರಾಯಚೂರು | |
| | | ಯಾದಗಿರಿ | 75 |
| | ಒಟ್ಟು | | **155** |

## ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಪ್ರಕರಣಗಳ ವಿವರ

| ಕ್ರ.ಸಂ | ವೃತ್ತದ ಹೆಸರು | ವಿಭಾಗದ ಹೆಸರು | ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಸಂಭವಿಸಿರುವ ಅಗ್ನಿ ಪ್ರಕರಣಗಳ ಸಂಖ್ಯೆ |
|---|---|---|---|
| 8 | ಹಾಸನ | ಹಾಸನ | 5 |
| | | ತುಮಕೂರು | 1428 |
| | | **ಒಟ್ಟು** | **1433** |
| 9 | ಕೆನರಾ | ಶಿರಸಿ | 115 |
| | | ಕಾರವಾರ | 87 |
| | | ಹೊನ್ನಾವರ | 0 |
| | | ಹಳಿಯಾಳ | 5 |
| | | ಯಲ್ಲಾಪುರ | 0 |
| | | ಕೆ.ಟಿ.ಆರ್ ದಾಂಡೇಲಿ | 22 |
| | | **ಒಟ್ಟು** | **229** |
| 10 | ಕೊಡಗು | ನಾಗರಹೊಳೆ | 2 |
| | | ಮಡಿಕೇರಿ | 2 |
| | | ವಿರಾಜಪೇಟೆ | 7 |
| | | **ಒಟ್ಟು** | **11** |
| 11 | ಮೈಸೂರು | ಮೈಸೂರು | 28 |
| | | ಮಂಡ್ಯ | 306 |
| | | ಹುಣಸೂರು | 0 |
| | | **ಒಟ್ಟು** | **334** |
| 12 | ಮಂಗಳೂರು | ಮಂಗಳೂರು | 15 |
| | | ಕುಂದಾಪುರ | 3 |
| | | ಕುದುರೆಮುಖ ವಿಭಾಗ, ಕಾರ್ಕಳ | 27 |
| | | **ಒಟ್ಟು** | **45** |
| 13 | ಶಿವಮೊಗ್ಗ | ಶಿವಮೊಗ್ಗ | 3 |
| | | ಭದ್ರಾವತಿ | 175 |
| | | ಸಾಗರ | 731 |
| | | **ಒಟ್ಟು** | **909** |
| | | **ಸಂಚಿತ** | **4639** |

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂಪನ್ಮೂಲ ನಿರ್ವಹಣೆ)